## ಮಲೇಶಿಯನ್ ಪಾಮೆಣ್ಣೆ ರಫ್ತು ಹೆಚ್ಚಳ,ಫ್ಯೂಚರ್ ದರ ಕುಸಿತ:–

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 7 ಶೇಕಡಾ ಕುಸಿತ ಕಂಡಿದೆ.ಸೆಪ್ಟೆಂಬರ್ 1 ರಿಂದ 25 ರ ತನಕ ಮಲೇಶಿಯನ್ ಪಾಮೆಣ್ಣೆ ರಫ್ತು ಸುಮಾರು 21 ಶೇಕಡಾ ಹತ್ತಿರ ಹೆಚ್ಚಳಗೊಂಡಿದ್ದು ಅಗಸ್ಟ್ ತಿಂಗಳ ಇದೇ ಅವಧಿಯ 966, 655 ಟನ್‌ಗಳಿಂದ 1,168,627 ಟನ್‌ಗಳಿಗೇರಿದೆಯೆಂದು ಕಾರ್ಗೋ ಸರ್ವೇಯರ್ ಇಂಟರ್ ಟೆಸ್ಟಿಂಗ್ ಸರ್ವಿಸಸ್ ವರದಿ ಮಾಡಿದೆ.ದಲಿಯನ್ ಸೋಯಾ ಎಣ್ಣೆ ದರ 3.28 ಶೇಕಡಾ ಹಾಗು ಪಾಮೆಣ್ಣೆ 4.7 ಶೇಕಡಾ ದರ ಇಳಿಕೆಯಾಗಿದೆ. ಜಾಗತಿಕ ಆರ್ಥಿಕ ಹಿಂಜರಿತ,ಮಂದಗತಿ ಹಾಗೂ ಬೇಡಿಕೆ ಇಳಿಕೆ, ಉತ್ಪಾದನೆ ಹೆಚ್ಚಳದಿಂದ ಈ ವರ್ಷ ಪಾಮೆಣ್ಣೆ ದರ ಇನ್ನೂ ಇಳಿಕೆ ಕಾಣಬಹುದೆಂದು ವಿಶ್ಲೇಷಕರು ನಿರೀಕ್ಷೆ ಹೊಂದಿದ್ದಾರೆಯೆನ್ನಲಾಗಿದೆ. ಪಾಮೆಣ್ಣೆ ದರ 27/9 ಕ್ಕೆ ಮತ್ತೆ 2 ಶೇಕಡಾ ಕುಶಿತವಾಗಿದೆ.

## 2022 ಅಂತ್ಯಕ್ಕೆ ಇಂಡೋನೇಶಿಯಾ ಪಾಮೆಣ್ಣೆ ದಾಸ್ತಾನು ಮಿಲಿಯನ್ ಟನ್ ಗಳಿಗೇರಿಕೆ

ಹಿಂದೆ ರಫ್ತು ನಿರ್ಬಂಧದ ನಂತರ ಇಂಡೋನೇಶಿಯಾ ರಹಿತ, ತೆರಿಗೆ ಇಳಿಕೆ ಹಾಗೂ ಡಿಸ್ಕೌಂಟ್ ಮುಂತಾಗಿ ರಫ್ತು ಹೆಚ್ಚಳಕ್ಕೆ ಪ್ರಯತ್ನಿಸುತ್ತಿದ್ದಾಗ್ಯೂ ಅಲ್ಲಿನ ಪಾಮೆಣ್ಣೆ ರಫ್ತು ಇನ್ನೂ ಹಿಂದಿನ ವರ್ಷದ 33.7 ಮಿಲಿಯನ್ ಟನ್‌ಗಳಿಗಿಂತ ತುಂಬಾ ಹಿಂದಿದೆಯೆನ್ನಲಾಗಿದ್ದೆ ರಫ್ತು ಇಳಿಕೆ ಉತ್ಪಾದನೆ ಹೆಚ್ಚಳದಿಂದ 2022 ರ ಅಂತ್ಯದ ಇಂಡೋನೇಶಿಯಾದ ಪಾಮೆಣ್ಣೆ ದಾಸ್ತಾನು 5 ಮಿಲಿಯನ್ ಟನ್‌ಗಳಿಗೇರಲಿದೆಯೆನ್ನಲಾಗಿದೆ.

## ಮಾರುಕಟ್ಟೆಗಳಿಗೆ ಬೇಳೆಕಾಳು ಆವಕ ಇಳಿಕೆ:–

ಮಳೆಯ ವ್ಯತ್ಯಯದಿಂದಾಗಿ ಈ ವರ್ಷ ಬೇಳೆಕಾಳು ಮುಂಗಾರು ಮಳೆಯ ಮೇಲೆ ವ್ಯತಿರಿಕ್ತ ಪರಿಣಾಮವುಂಟಾಗಿದ್ದು ಮಾರುಕಟ್ಟೆಗೆ ಬೇಳೆಕಾಳು ಪೂರೈಕೆ ಇಳಿಕೆಯಾಗಿದೆಯೆನ್ನಲಾಗಿದೆ. ಪರಿಣಾಮ ಇವುಗಳ ಮಾರಾಟ ದರ ಹೆಚ್ಚಳವಾಗಿದೆ. ತೊಗರಿ ಮೇಲೆ ಹೆಚ್ಚಿನ ಪರಿಣಾಮವಾಗಿದ್ದು ದರ 25 ಶೇಕಡಾಕ್ಕಿಂತ ಹೆಚ್ಚಳವಾಗಿದೆ. ಹೆಚ್ಚಿನ ಬೇಳೆಕಾಳು ಬೆಳೆಯುವ ರಾಜ್ಯಗಳು 40 ಶೇಕಾಡಕ್ಕಿಂತ ಹೆಚ್ಚು ಮಳೆಬೀಳುವಿಕೆಯ ಕೊರತೆಯನ್ನು ಕಂಡಿದೆ. ಅಲ್ಲಿನ ಕೆಲವೆಡೆ ನೆರೆಹಾವಳಿಯೂ ಕಾಡಿದೆ. ಮುಂಬಯಿ ಎ.ಪಿ.ಎಂ.ಸಿ ಮಾರುಕಟ್ಟೆಗೆ ತೊಗರಿ ಬೇಳೆ ಆವಕ ಅಗಸ್ಟ್‌ನಲ್ಲಿ 65194 ಕ್ವಿಂಟಲ್ ಇದ್ದುದು ಸೆಪ್ಟೆಂಬರ್‌ನಲ್ಲಿ 22528 ಕ್ವಿಂಟಲ್‌ಗೆ ಇಳಿಕೆಯಾಗಿದೆಯೆನ್ನಲಾಗಿದೆ. ಮಸೂರ್‌ದಾಲ್ ದರಗಳು 3 ರಿಂದ 5 ಶೇಕಡಾ ಹೆಚ್ಚಳವಾಗಿದೆ. ಅದೇ ತರ ಉದ್ದು, ಹೆಸರುಕಾಳು, ಕಡ್ಲೆ ದರಗಳು ಹೆಚ್ಚಳವಾಗಿವೆ.

ಪ್ರಮುಖ ಬೇಳೆಕಾಳು ಬೆಳೆಯುವ ರಾಜ್ಯಗಳಲ್ಲಿ ಮಾರುಕಟ್ಟೆಗೆ ಬೇಳೆಕಾಳು ಆವಕ 30 ರಿಂದ 40 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಮುಂದಿನ ದಿನಗಳಲ್ಲಿ ಬೇಳೆಕಾಳು ದರಗಳು ಇನ್ನೂ ಹೆಚ್ಚಳವಾಗುವ ಸಾಧ್ಯತೆಗಳಿವೆ.